**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.</u>**

**<u>ಎಸ್.ಸಿ ಸಂಖ್ಯೆ– 339/2022</u>**

| | | |
|---|---|---|
| **ಸಾಕ್ಷಿದಾರನ ಹೆಸರು** | : ಕೆ.ಎಸ್ ನಾರಾಯಣ್ | **ಪಿ.ಡಬ್ಲ್ಯೂ– 6** |
| **ತಂದೆಯ ಹೆಸರು** | : ಲೇಟ್ ಕೆ.ಎಸ್ ಸಣ್ಣೇಗೌಡ | **ಸಿ.ಡಬ್ಲ್ಯೂ– 18** |
| **ವಯಸ್ಸು** | : 61 ವರ್ಷ | |
| **ಉದ್ಯೋಗ** | : ನಿವೃತ್ತ ಎ.ಎಸ್.ಐ | |
| **ವಾಸಸ್ಥಳ** | : ಮಹಾಲಕ್ಷ್ಮೀಲೇಔಟ್, ಮೈಸೂರು | |

**<u>ಸಾಕ್ಷಿಯನ್ನು ಈ ದಿನ ದಿಃ24.01.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

1. ನಾನು 2013 ರಿಂದ 2019 ರವರೆಗೆ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ– 08.11.2018 ರಂದು ನಾನು ಹಗಲು ಕರ್ತವ್ಯದಲ್ಲಿ ನೇಮಕವಾದಾಗ, ಠಾಣಾಧಿಕಾರಿಯವರು ನನಗೆ ಆಸ್ಪತ್ರೆಯಿಂದ ಮೆಮೋ ಬಂದಿದ್ದು, ಹೊರರೋಗಿಯಾಗಿ ಚಿಕಿತ್ಸೆ ಪಡೆಯುತ್ತಿರುವ ವಿನಯ್ ಎಂಬ ಗಾಯಾಳುವಿನ ಹೇಳಿಕೆಯನ್ನು ದಾಖಲಿಸಿಕೊಂಡು ಬರುವಂತೆ ಸೂಚಿಸಿದರು. ನಂತರ ನಾನು 12.15 ಗಂಟೆ ಸುಮಾರಿಗೆ ಕೆ.ಆರ್.ಆಸ್ಪತ್ರೆಗೆ ಬೇಟಿ ನೀಡಿರುತ್ತೇನೆ. ನಾನು ಹೋದಾಗ ಗಾಯಾಳು ವಿನಯ್ ಹೊರರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದು, ನಾನು 12.15 ರಿಂದ 1.15 ರವರೆಗೆ ಸದರಿಯವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಹೇಳಿಕೆಯನ್ನು

ದಾಖಲಿಸಿಕೊಂಡು ವಾಪಸ್ಸು ಠಾಣೆಗೆ ಬಂದು, ಸದರಿ ಲಿಖಿತ ಹೇಳಿಕೆಯನ್ನು ಠಾಣಾ ಎಸ್.ಹೆಚ್.ಒರವರಿಗೆ 1.30ರ ಸುಮಾರಿಗೆ ನೀಡಿದ್ದು, ಠಾಣಾ ಎಸ್.ಹೆಚ್.ಒ ರವರು ಅದನ್ನು ಪಡೆದುಕೊಂಡು ಪ್ರಕರಣವನ್ನು ದಾಖಲಿಸಿಕೊಂಡು ಠಾಣಾ ಮೊಕದ್ದಮೆ ಸಂಖ್ಯೆ- 352/2018 ರಡಿಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತಾರೆ. ಸಾಕ್ಷಿಯು ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ-1 ಎಂದು ಗುರುತಿಸಲಾಗಿರುತ್ತದೆ. ಹೇಳಿಕೆ ಪಡೆಯುವಾಗ ಗಾಯಾಳು ಹೇಳಿಕೆ ನೀಡುವ ಸ್ಥಿತಿಯಲ್ಲಿ ಇದ್ದರು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-**

3. ನಾನು ಗಾಯಾಳುವಿನಿಂದ ಹೇಳಿಕೆಯನ್ನು ದಾಖಲಿಸಿಕೊಳ್ಳುವಾಗ, ಗಾಯಾಳು ಯಾವುದೇ ಆರೋಪಿತರ ಹೆಸರು ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಕೀರ್ತಿ ಎನ್ನುವವರ ಹೆಸರು ಮಾತ್ರ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಅನುಕೂಲವಾಗುವ ರೀತಿಯಲ್ಲಿ ಆರೋಪಿತರ ಹೆಸರುಗಳನ್ನು ಹೇಳಿಕೆಯಲ್ಲಿ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**